ದಿನಾಂಕಃ 15-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರ ನಂ.4 ಪರ ಶ್ರೀ. ಎ ಎಸ್ ಪಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ನಮ್ಮ ವಿಮಾ ಕಂಪನಿಯವರು ನನಗೆ ಸಾಕ್ಷ್ಯ ನುಡಿಯಲು ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್ -5 ಎಂದು, ವಾಹನ ಸಂಖ್ಯೆ ಕೆಎ-27/ಟಿಸಿ-9578 ರ ವಿಮೆ ವರದಿ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಆರ್-6 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಲು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ. ಬಿಸಿಕೆ ವಕೀಲರಿಂದ.**

ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ನಾನು ಸಾಕ್ಷ್ಯವನ್ನು ಪೊಲೀಸು ಕಾಗದ ಪತ್ರಗಳ ಆಧಾರದ ಮೇಲಿಂದ ನುಡಿಯುತ್ತಿದ್ದೇನೆ ಎಂದರೆ ಸರಿ. ಆ ದಿವಸ ಟ್ರ್ಯಾಕ್ಟರ್ ದಲ್ಲಿ ಚಾಲಕ ಮತ್ತು ಟ್ರೇಲರ್ ದಲ್ಲಿ ಮೃತ ಅಬ್ದುಲಖಾದರ ಜಿಲಾನಿ ಮಾತ್ರ ಹೊರಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಆತ ಟ್ರ್ಯಾಕ್ಟರ್ ದಲ್ಲಿ ಹೋಗುತ್ತಿದ್ದರು ಎಂದು ಸ್ವಂತಕ್ಕೆ ನುಡಿಯುತ್ತಾರೆ. ಈ ಅರ್ಜಿಯಲ್ಲಿ ಅರ್ಜಿದಾರರು ಹಾಜರುಪಡಿಸಿದ ದೋಷಾರೋಪಣೆ ಪಟ್ಟಿ ಬಗ್ಗೆ ಮಾಹಿತಿ ಇರುತ್ತದೆ. ನಿಪಿ-11 ರಲ್ಲಿ ಮೃತ ಅಬ್ದುಲಖಾದರ ಇವರು ಗೊಬ್ಬರದ ಚೀಲಗಳನ್ನು ಟ್ರೇಲರ್ ದಲ್ಲಿ ಹೇರಿಕೊಂಡು ಅದರ ಮೇಲೆ ಕುಳಿತು ಸಾಗುತ್ತಿರುವಾಗ ಟ್ರ್ಯಾಕ್ಟರ್ ಚಾಲಕನ ದುಡುಕುತನದಿಂದ ವಾಹನ ಚಲಾಯಿಸಿದ್ದರಿಂದ ಅಪಘಾತವಾಗಿರುವುದಾಗಿ ಆಪಾದಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ

ತನಿಖಾಧಿಕಾರಿಗಳು ಸರಿಯಾಗಿ ತನಿಖೆ ಕೈಗೊಳ್ಳದೇ ಹಾಗೇ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಮೃತ ಅಬ್ದುಲಖಾದರ ಜಿಲಾನಿ ಇವರು ಟ್ರ್ಯಾಕ್ಟರ್ ದ ಮಟಗಾರ್ಡ ಮೇಲೆ ಕುಳಿತು ಪ್ರಯಾಣಿಸುತ್ತಿರುವುದಾಗಿ ಹೇಳಿದ್ದು ಅದರ ಕುರಿತು ನಮ್ಮ ವಿಮಾ ಕಂಪನಿಯಿಂದ ತನಿಖೆ ಕೈಗೊಂಡಿರುವುದಿಲ್ಲ. ಸಾಕ್ಷಿ ಪ್ರ.ವ.ವ. ಯ ಪ್ರಕಾರ ಹಾಗೇ ವಸ್ತುಸ್ಥಿತಿ ಇರುವುದಾಗಿ ನುಡಿಯುತ್ತಾರೆ. ಗೊಬ್ಬರ ಚೀಲ ಸಾಗಿಸುತ್ತಿದ್ದ ಟ್ರೇಲರ್ ಮೇಲೆ ಕುಳಿತು ಮೃತ ಅಬ್ದುಲಖಾದರ ಜಿಲಾನಿ ಇವರು ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿದ್ದರೂ ನಮ್ಮ ವಿಮಾ ಕಂಪನಿಯವರು ಹೊಣೆಗಾರಿಕೆಯಿಂದ ತಪ್ಪಸಿಕೊಳ್ಳುವುದರ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಟ್ರ್ಯಾಕ್ಟರ್ ಯಾರು ಚಲಾಯಿಸುತ್ತಿದ್ದರು ಮತ್ತು ಹಮಾಲರು ಯಾರು ಇದ್ದರು ಎಂಬ ಸಂಗತಿಯನ್ನು ವಾಹನದ ಮಾಲೀಕ ಮಾತ್ರ ಹೇಳಬಹುದು ಎಂದರೆ ಸರಿಯಲ್ಲ. ಟ್ರೇಲರ್ ಗೆ ನಮ್ಮ ಕಂಪನಿಯ ವಿಮೆ ಇತ್ತು ಎಂದರೆ ಸರಿ. ನಿಆರ್-6 ರ ಪ್ರಕಾರ ಸಿಟಿಂಗ್ ಕೆಪ್ಯಾಸಿಟಿ ಒಂದು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿಆರ್-6 ರ ಪ್ರಕಾರ 4 ಕಾರ್ಮಿಕರಿಗೆ ವಿಮಾ ವ್ಯಾಪ್ತಿ ಹಣ ರೂ.200/- ಸಂದಾಯ ಮಾಡಲಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಅದು ಪ್ರಯಾಣಕ್ಕೆ ಅನ್ವಯವಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಆರ್-6 ರಲ್ಲಿ ಮಾಲೀಕ, ಕಾರ್ಮಿಕ ವಾಹನದಲ್ಲಿ ಕುಳಿತುಕೊಂಡು ಹೋಗುವಾಗ ಯಾವುದಾದರೂ ಅವಗಡ, ಅಪಘಾತ ಸಂಭವಿಸಿದರೆ ಅದು ಸಹ ವಿಮಾ ವ್ಯಾಪ್ತಿಗೆ ಒಳಪಡುತ್ತದೆ ಎಂಬುವುದಾಗಿರುತ್ತದೆ ಎಂದರೆ ಸರಿಯಲ್ಲ. ಆದ ಅಪಘಾತ ಅದು ನಮ್ಮ ವಿಮಾ ವ್ಯಾಪ್ತಿಯಲ್ಲಿ ಪರಿಹಾರಕ್ಕೆ ಒಳಪಡುತ್ತಿದ್ದರೂ ಸಹ ನಮ್ಮ ಕಂಪನಿಯವರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದರ ಸಲುವಾಗಿ ನನ್ನಿಂದ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅಪಘಾತ ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿದ್ದರಿಂದ ಟ್ರಾಕ್ಟರ್ ಟ್ರೇಲರ್ ಗೆ ಜಾಯಿಂಟ್ ಇದ್ದಿದ್ದರಿಂದ ಅದು ವಿಮಾ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ- ಎದುರುದಾರ ನಂ.2 ಪರ ಶ್ರೀ. ವಿಎಸ್‌ಎ ವಕೀಲರಿಂದ.</u>**

ನಿಆರ್-6 ಟ್ರ್ಯಾಕ್ಟರ್ ಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿ. ಟ್ರ್ಯಾಕ್ಟರ್ ಮಾಲೀಕರು ಮತ್ತು ಟ್ರೇಲರ್ ಮಾಲೀಕರು ಬೇರೆ ಬೇರೆ ಎಂದರೆ ಸರಿ.

**<u>ಪಾಟೀಸವಾಲುಃ- ಎದುರುದಾರ ನಂ.1 ಮತ್ತು 3 ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ.</u>**

ಮೃತ ಅಬ್ದುಲಖಾದರ ಜಿಲಾನಿ ಇವರನ್ನು ಹಮಾಲಿ ಅಂತಾ ಎದುರುದಾರ ನಂ.1 ಮತ್ತು 3 ಇವರು ಕೆಲಸಕ್ಕೆ ನೇಮಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮೃತ ಅಬ್ದುಲಖಾದರ ಇವರು ಅಪಘಾತದ ದಿನದಂದು ಗೊಬ್ಬರ ಚೀಲ ಹೇರಿದ ಟ್ರೇಲರ್ ಮೇಲೆ ಕುಳಿತು ಪ್ರಯಾಣಿಸುತ್ತಿದ್ದರು ಎಂದರೆ ಸರಿಯಲ್ಲ. ಆತನ ಮೇಲೆ ಗೊಬ್ಬರದ ಚೀಲಗಳು ಬಿದ್ದಿದ್ದವು ಎಂಬುವುದಾಗಿ ಪ್ರ.ವ.ವ. ಯಲ್ಲಿ ಹೇಳಲಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).